

# ಇಸ್ರೋಗೆ ವರ್ಚುವಲ್ ರೂಪ!

**ಅಂತರರಾಷ್ಟ್ರೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿದ ಇಸ್ರೋ (ಭಾರತೀಯ ಬಾಹ್ಯಾಕಾಶ ಸಂಸ್ಥೆ), ಅತೀ ವೇಗವಾಗಿ ಬೆಳೆಯುತ್ತಿರುವ ವರ್ಚುವಲ್ ಲೋಕಕ್ಕೆ ಕಾಲಿಟ್ಟಿದೆ.**

**■ ಶಶಿಕುಮಾರ್ ಸಿ.**

ಎಲ್ಲರೂ ತಂತ್ರಜ್ಞಾನ ಆಧಾರಿತ ವರ್ಚುವಲ್ ಲೋಕದ ಹಿಂದೆ ಬೀಳುತ್ತಿರುವಾಗ ಇಸ್ರೋ ತಾನೂ ಯಾರಿಗೂ ಕಮ್ಮಿ ಇಲ್ಲವೆಂಬಂತೆ ಈ ಕ್ಷೇತ್ರಕ್ಕೆ ಕಾಲಿಟ್ಟಿದೆ. ಅತ್ಯಾಧುನಿಕ ತಂತ್ರಜ್ಞಾನ ಆಧಾರಿತ 3ಡಿ ರೂಪದ ವರ್ಚುವಲ್ ಸ್ಪೇಸ್ ಮ್ಯೂಸಿಯಂ ಸ್ಥಾಪಿಸಿರುವ ಇಸ್ರೋ, ಅದಕ್ಕೆ 'ಸ್ಪಾರ್ಕ್' ಎಂದು ಹೆಸರಿಟ್ಟಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಈ ವರ್ಚುವಲ್ ಸ್ಪೇಸ್ ಮ್ಯೂಸಿಯಂ ಅನ್ನು ಪ್ರಾರಂಭಿಸಲಾಗಿದೆ.

ಮೆಟಾವರ್ಸ್ ಮಾದರಿಯಲ್ಲಿ ಇಸ್ರೋಗೆ ವರ್ಚುವಲ್ ಸ್ಪರ್ಶ ನೀಡಲಾಗಿದೆ. ಇಸ್ರೋ ಸಂಸ್ಥೆ ಮತ್ತು ಅದರ ಕಾರ್ಯನಿರ್ವಹಣೆಯನ್ನು ವರ್ಚುವಲ್ ಆಗಿಸಿರುವುದರ ಮೂಲಕ ಆಸಕ್ತರಿಗೆ ಹೊಸ ಲೋಕದ ಬಾಗಿಲನ್ನು ತೆರೆದಿದೆ. **spacepark.isro.gov.in** ಎಂಬ ವೆಬ್‌ಸೈಟ್ ಅನ್ನು ರೂಪಿಸಿರುವ ಇಸ್ರೋ, ಅದರಲ್ಲಿ ತನ್ನ ವರ್ಚುವಲ್ ಕ್ರಿಯೇಟಿವಿಟಿಯ ವಿಡಿಯೊ ಸೇರಿದಂತೆ ಹಲವು ಮಾಹಿತಿಯನ್ನು ಅಪ್‌ಲೋಡ್ ಮಾಡಿದೆ.

ಈ ವೆಬ್‌ಸೈಟ್ ಕ್ಲಿಕ್ಕಿಸಿ ಒಳಹೊಕ್ಕರೆ, ಸ್ವಯಂಚಾಲಿತ ಸ್ವಾಗತ ನಿಮ್ಮನ್ನು ಎದುರುಗೊಳ್ಳುತ್ತದೆ. ಅಲ್ಲಿ ಎಂಟರ್ ಎಂಬ ಆಯ್ಕೆಯನ್ನು ಕಲ್ಪಿಸಲಾಗಿದೆ. ಅದನ್ನು ಕ್ಲಿಕ್ಕಿಸಿದರೆ ಇಸ್ರೋದ ವರ್ಚುವಲ್ ಸ್ಪೇಸ್ ಮ್ಯೂಸಿಯಂ 'ಸ್ಪಾರ್ಕ್' ತೆರೆದುಕೊಳ್ಳುತ್ತದೆ. 6 ನಿಮಿಷ 34 ಸೆಕೆಂಡ್ ಇರುವ ಈ ವಿಡಿಯೊ 'ಸ್ಪಾರ್ಕ್'ನ ಪರಿಚಯ ಮಾಡಿಕೊಡುತ್ತದೆ. ನಂತರ ಈ ವಿಡಿಯೊವನ್ನು ಸ್ಕಿಪ್ ಮಾಡಿದರೆ ಸ್ಪಾರ್ಕ್ ಬಗೆಗಿನ ಮಾಹಿತಿ ಪುಟ ತೆರೆದುಕೊಳ್ಳುತ್ತದೆ. ಸ್ಪಾರ್ಕ್ ವಿಶೇಷತೆ ಬಗ್ಗೆ ಇದರಲ್ಲಿ ಮಾಹಿತಿ ಅಡಕವಾಗಿದೆ.

ಈ ಮಾಹಿತಿಯ ಮೇಲೆ ಕಣ್ಣಾಡಿಸಿ ಕ್ಲೋಸ್ ಮಾಡಿದರೆ ವೆಬ್‌ಸೈಟ್‌ನ ಬಲಭಾಗದಲ್ಲಿ ಮೆನು ಆಯ್ಕೆ ಕಾಣುತ್ತದೆ. ಅದನ್ನು ಕ್ಲಿಕ್ಕಿಸಿದೊಡನೆ ಸ್ಪಾರ್ಕ್‌ಗೆ ಪ್ರವೇಶ ಸಿಗುತ್ತದೆ. ಅದರಲ್ಲಿ ದಿ ಲ್ಯಾಂಡ್‌ಸ್ಕೇಪ್ ಆಫ್ ಸ್ಪಾರ್ಕ್, ಮ್ಯೂಸಿಯಂ ಮತ್ತು ಥಿಯೇಟರ್‌ಗೆ ಪ್ರವೇಶ, ಲಾಬಿ ಎಂಬ ಆಯ್ಕೆಗಳಿದ್ದು, ಅವುಗಳನ್ನು ಕ್ಲಿಕ್ ಮಾಡಿದರೆ ಆ ನಿರ್ದಿಷ್ಟ ವಿಷಯದ ವರ್ಚುವಲ್ ರೂಪ ತೆರೆದುಕೊಳ್ಳುತ್ತದೆ. ಅದನ್ನು ವೀಕ್ಷಿಸುವ ಮೂಲಕ 'ಇಸ್ರೋ ವರ್ಚುವಲ್ ಸ್ಪೇಸ್ ಪಾರ್ಕ್'ನ ಅನುಭವ ಪಡೆಯಬಹುದಾಗಿದೆ.

## ಸ್ಪಾರ್ಕ್‌ನ ವಿಶೇಷಗಳು

ಸ್ಪಾರ್ಕ್ ಉದ್ಯಾನ ನೋಡಲು ಆಕರ್ಷಕವಾಗಿದೆ. ಇಸ್ರೋದ ಕಾರ್ಯವಿಧಾನ ಕಚೇರಿ, ಇನ್ನಿತರ ಮಾಹಿತಿಯನ್ನು ಈ ವರ್ಚುವಲ್ ಸ್ಪಾರ್ಕ್ ಒಳಗೊಂಡಿದೆ. ಈ ಸ್ಪಾರ್ಕ್ ಪಾರ್ಕ್‌ನಲ್ಲಿ ಇಸ್ರೋ ಮ್ಯೂಸಿಯಂ, ಥಿಯೇಟರ್, ವೀಕ್ಷಣಾಲಯ, ಬೃಹತ್ ಗಾತ್ರದ ರಾಕೆಟ್‌ಗಳ ಉದ್ಯಾನ, ಸಮುದ್ರದಂಚಿನ ಕೆಫೆ ಏರಿಯಾ, ಮಕ್ಕಳ ಆಟದ ಮೈದಾನ, ವಾಟರ್ ಗಾರ್ಡನ್, ಬ್ಯಾಗೇಜ್, ಟಿಕೆಟ್ ಕೌಂಟರ್, ಸೆಕ್ಯುರಿಟಿ ಸಿಸ್ಟಂ, ಸೋಲಾರ್ ಸಿಸ್ಟಂ ಸೇರಿದಂತೆ ಹಲವು ಆಕರ್ಷಕ ಅಂಶಗಳಿವೆ.

ಈ ಉದ್ಯಾನದಲ್ಲಿ ಅತ್ಯಾಕರ್ಷಕವಾದದ್ದು ಮ್ಯೂಸಿಯಂ. ಇಲ್ಲಿ ಇಸ್ರೋ ಸಾಧನೆಗಳು, ಉಪಗ್ರಹಗಳು, ಉಪಗ್ರಹ ಉಡಾವಣೆ ಮಾಡುವ ವಾಹನಗಳ ವಿವರಗಳಿವೆ. ಇಸ್ರೋಗೆ ಅಭೂತಪೂರ್ವ ಕಾಣಿಕೆ ಕೊಟ್ಟ ವಿಜ್ಞಾನಿಗಳ ಕುರಿತಾದ ಮಾಹಿತಿಯು ಇಲ್ಲಿ ಸ್ಮರಿಸಲಾಗಿದೆ. ಸ್ಪಾರ್ಕ್ ಪಾರ್ಕ್‌ನಲ್ಲಿ ಮತ್ತೊಂದು ಆಕರ್ಷಕ ತಾಣವೆಂದರೆ ಅದು ಥಿಯೇಟರ್. ಇಲ್ಲಿಗೆ ಭೇಟಿ ನೀಡಿ ಇಸ್ರೋದ ಬಗ್ಗೆ ಮತ್ತಷ್ಟು ಮಾಹಿತಿ ಪಡೆಯುವುದರ ಜೊತೆಗೆ ಮಹತ್ತರ ಮೈಲಿಗಲ್ಲುಗಳನ್ನು ಕಾಣುವುದಕ್ಕೂ ಈ ಥಿಯೇಟರ್ ಸಾಕ್ಷಿಯಾಗಿದೆ.

ಬೇರೆ ಬೇರೆ ಮಿಷನ್‌ಗಳು ಮತ್ತು ಅವುಗಳೊಡನೆ ಸಂವಹನ ನಡೆಸುವ ನಿಟ್ಟಿನಲ್ಲಿ ಡಿಜಿಟಲ್ ಕಂಟೆಂಟ್ ಮಾದರಿಗೆ ಒಗ್ಗಿಸಿಕೊಂಡು ಸ್ಪಾರ್ಕ್ ಅನ್ನು ರೂಪಿಸಲಾಗಿದೆ. ಇಲ್ಲಿ ಕಾಣುವ ಹಲವು ದಾಖಲಾತಿಗಳು, ಚಿತ್ರಗಳು ಮತ್ತು ವಿಡಿಯೊಗಳು ಇಸ್ರೋದ ಉಡಾವಣಾ ವಾಹನಗಳು, ಉಪಗ್ರಹಗಳು ಮತ್ತು ವಿಜ್ಞಾನಿಗಳ ಕುರಿತಾಗಿವೆ ಎಂದು ಇಸ್ರೋ ಅಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿವೆ. ಸ್ಪಾರ್ಕ್ ಬೀಟಾ ವರ್ಷನ್ ಆಗಿದ್ದು, ಇದು ಇಸ್ರೋದ ವೆಬ್‌ಸೈಟ್‌ಗೆ ನೇರವಾಗಿ ಕರೆದೊಯ್ಯುತ್ತದೆ. ■